# ವಚನ ಚಳುವಳಿ ಮತ್ತು ಸಮಾಜ ಪರಿವರ್ತನೆ

**ಮುಕ್ತಾ ಪೈ.**[1] & **ಜ್ಯೋತಿ ಶಂಕರ್**[2]

[1]ಸಂಶೋಧನಾರ್ಥಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

[2]ಸಹಾಯಕ ಪ್ರಾಧ್ಯಾಪಕಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು.

DOI: https://doi.org/10.5281/zenodo.15504282

## ABSTRACT:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯಕ್ಕೊಂದು ವಿಶಿಷ್ಟವಾದ ಸ್ಥಾನವಿದೆ. ಇದು ಎಲ್ಲಾ ವರ್ಗ, ವರ್ಣದ ಜನಸಾಮಾನ್ಯರು ತಮ್ಮ ಮನಸ್ಸಿನಲ್ಲಿದ್ದ ಭಾವನೆಗಳನ್ನು ವ್ಯಕ್ತಪಡಿಸಿದ ಅದ್ಭುತವಾದ ಭಕ್ತಿ ಸಾಹಿತ್ಯ. ಮೇಲು-ಕೀಳು, ಜಾತಿ-ಮತ, ಗಂಡು-ಹೆಣ್ಣು ಎಂಬ ಭೇದವಿಲ್ಲದೆ ಎಲ್ಲರೂ ಸಾಮೂಹಿಕವಾಗಿ ಪಾಲ್ಗೊಂಡ ಸಾಹಿತ್ಯ ಜಗತ್ತಿನ ಇತಿಹಾಸದಲ್ಲಿಯೇ ವಿರಳವಾಗಿದೆ. ಶರಣ ಧರ್ಮದ ವಿಶಿಷ್ಟತೆ ಎಂದರೆ ಪೂಜೆ ಪುನಸ್ಕಾರಗಳಿಗೆ, ಯಜ್ಞ ಯಾಗಾದಿಗಳಿಗೆ, ಆಚರಣೆಗಳಿಗೆ ಅವಕಾಶ ನೀಡಲಿಲ್ಲ. ವಚನಾಕಾರರು 12ನೇ ಶತಮಾನದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಹೀಗೆ ಹಲವು ಕ್ಷೇತ್ರಗಳಲ್ಲಿ ಬದಲಾವಣೆಗಳನ್ನು ತಂದು ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಜನ ಸಮೂಹವನ್ನು ಒಂದೆಡೆ ಸೇರಿಸುವ ಕಾರ್ಯವನ್ನು ಮಾಡಿದರು. ವಚನ ಚಳುವಳಿಯ ದೀಪವನ್ನು ನೂರಾರು ವಚನಕಾರರು ಹಚ್ಚಿ ಬೆಳಗಿಸಿದ್ದಾರೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ, ದೇವರ ದಾಸಿಮಯ್ಯ ಹೀಗೆ ಇನ್ನೂ ಹಲವಾರು ಶರಣರು ತಮ್ಮ ಮೌಲ್ಯಯುತವಾದ ವಚನಗಳಿಂದ ಸಮಾಜದ ಬದಲಾವಣೆಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಜಗತ್ತಿನ ಯಾವ ಭಾಷೆಯಲ್ಲಿ ಆಗದ ಸಾಹಿತ್ಯ ರಚನೆ ಈ ಕಾಲದಲ್ಲಿ ಹುಲುಸಾಗಿ ಬೆಳೆಯಿತು.

## KEYWORDS:

ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಅಕ್ಕಮಹಾದೇವಿ, ಗೊಗ್ಗವ್ವೆ, ವಚನ ಸಾಹಿತ್ಯ, ಆಯ್ದಕ್ಕಿ ಲಕ್ಕಮ್ಮ, ಮಹದೇವಮ್ಮ, ಅಕ್ಕಮ್ಮ, ಬಸವಣ್ಣ.

ವಚನ ಎಂದರೆ ಸತ್ಯದ ಮಾತು. ಅನುಭವದ ಮಾತು ಎಂದು ಅರ್ಥ. ಸಾಮಾನ್ಯವಾಗಿ ವಚನ ಎಂದರೆ ಪ್ರತಿಜ್ಞೆ, ನುಡಿದಂತೆ ನಡೆ ಮುಂತಾದ ಅರ್ಥವನ್ನು ಹೊಂದಿದೆ. 'ಅನ್ಯರ ವಚನವ ಕೊಂಡಾಡಲು ಕರ್ಮ ಬಿಡದು ಮೃದು ವಚನವೆ ಸಕಲ ಜಪಂಗಳಯ್ಯ' ಎಂಬ ಮಾತು ಬಸವಣ್ಣನವರ ವಚನದಲ್ಲೂ ಕೇಳಬಹುದು. ವಚನ ಸಾಹಿತ್ಯ ಸಮಾಜದ ಜನಸಾಮಾನ್ಯರ ಪ್ರತಿಯೊಂದು ದೃಷ್ಟಿಕೋನವನ್ನು ಕುರಿತು ಚರ್ಚಿಸುವುದರ ಸಹಕಾರ ರೂಪವಾಗಿದೆ. ಸಕಲ ಜನರ ಒಳ್ಳೆಯದನ್ನು

ಬಯಸಿದ ಶರಣರ ಕೊಡುಗೆ ಮಹತ್ವದ್ದಾಗಿದೆ. ಜಾತಿಯನ್ನು ಹೊಡೆದು ಹಾಕಲು ಹೋರಾಟ ಮಾಡಿದ ಶರಣರು ಸಾಮಾಜಿಕ ಸಮಾನತೆಯನ್ನು ಬಯಸಿದರು. ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳನ್ನು, ಕೆಟ್ಟ ಆಚರಣೆಗಳನ್ನು, ಮೂಢನಂಬಿಕೆಗಳನ್ನು ಖಂಡಿಸಿ 'ಸರ್ವರಿಗೂ ಸಮಪಾಲು; ಸರ್ವರಿಗೂ ಸಮ ಬಾಳು;' ಎಂಬ ತತ್ವವನ್ನು ಜನರಿಗೆ ಸಾರಿ ಹೇಳಿದರು. ಜನಸಾಮಾನ್ಯರನ್ನು ಸನ್ಮಾರ್ಗದತ್ತ ತರಲು ಇವರು ಸರಳ ಭಾಷೆಯಲ್ಲಿ ವಚನಗಳನ್ನು ರಚಿಸಿದರು. ಕಾಯಕ ಮತ್ತು ಸದಾಚಾರಗಳತ್ತ ಜನರ ಗಮನ ಸೆಳೆಯುವಂತೆ ಮಾಡಿದರು.

ಶಿವಶರಣರು ಮಾನವರೆಲ್ಲ ಒಂದೇ ಇಲ್ಲಿ ಯಾರು ಕೀಳಲ್ಲ, ಯಾರು ಮೇಲಲ್ಲ. ಎಲ್ಲರೂ ಸರ್ವ ಸಮಾನರಾಗಿದ್ದಾರೆ. ಎಲ್ಲರೂ ದುಡಿಯಬೇಕು. ದುಡಿಯುವ ಫಲ ದುಡಿಯುವವರೆಗೆ ಸಿಗಬೇಕು ಎಂದು ಹೇಳಿದರು. ಶರಣರು ಧರ್ಮಗಳನ್ನಾಗಲಿ, ರಾಜ್ಯಾಧಿಕಾರವನ್ನಾಗಲಿ, ವೇದ ಉಪನಿಷತ್ತನ್ನಾಗಲಿ, ಸಂಸಾರವನ್ನಾಗಲಿ ತಿರಸ್ಕಾರ ಭಾವನೆಯಿಂದ ನೋಡಲಿಲ್ಲ. ಸರ್ವಕಾಲಿಕವಾಗಿ ಯಾವುದು ಸತ್ಯವಾಗಿರುವುದು, ತಾರತಮ್ಯ ಭೇದವನ್ನು ಯಾವುದು ಮಾಡುವುದಿಲ್ಲವೋ, ಯಾವುದು ಎಲ್ಲರ ಕಲ್ಯಾಣವನ್ನು ಬಯಸುತ್ತಿದೆಯೋ ಅಂತಹುದನ್ನು ತಮ್ಮ ಚಿಂತನೆಗೆ ಒಳಗು ಮಾಡಿಕೊಂಡು ಸಮಾನತೆಯನ್ನು ಎತ್ತಿ ಹಿಡಿದು ಅದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದರು.

ಮೊಟ್ಟಮೊದಲ ಬಾರಿಗೆ ಜಾತಿ-ಮತ, ಪಂಥ-ಪಕ್ಷ, ಆಸ್ತಿ-ಅಂತಸ್ತು, ಮೇಲು-ಕೀಳು, ಬಡತನ-ಸಿರಿತನ ವರ್ಗ-ವರ್ಣ, ಆಳು-ಅರಸು ಹೀಗೆ ಬಿಡು ಬಿಟ್ಟಿರುವ ಹಲವು ವೈಶಮ್ಯಗಳನ್ನು ಸಮಾಜದಿಂದ ಕಿತ್ತು ಎಸೆಯಲು ಜನಸಾಮಾನ್ಯರನ್ನು ಒಂದುಗೂಡಿಸಲು ಅನ್ಯಾಯ, ಅಕ್ರಮ, ಶೋಷಣೆ, ದಬ್ಬಾಳಿಕೆ ದೌರ್ಜನ್ಯವನ್ನು ಖಂಡಿಸಿದ ಕೀರ್ತಿ ಶಿವಶರಣರಿಗೆ ಸಲ್ಲುತ್ತದೆ.

**"ಇವನಾರವ ಇವನಾರವ ಇವನಾರವನಂದೆನಿಸದಿರಯ್ಯಾ**
**ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದನಿಸಯ್ಯ**
**ಕೂಡಲಸಂಗಮದೇವಾ**
**ನಿಮ್ಮ ಮನೆಯ ಮಗನೆಂದೆನಿಸಯ್ಯಾ"[1]**

ಬಸವಣ್ಣನವರ ಈ ವಚನವನ್ನು ಗಮನಿಸಿದಾಗ ಸಮಾನತೆ ಎಷ್ಟು ಮುಖ್ಯ ಎಂದು ನಾವು ಅರಿಯಬೇಕಾಗಿದೆ. ಸಾಮಾಜಿಕ ತಾರತಮ್ಯಗಳನ್ನು ಖಂಡಿಸಿದ ಶರಣರು ಸಮಾನತೆಯ ಬಗೆಗೆ ಸರಳವಾದ ಸ್ಪಷ್ಟವಾದ ಪರಿಣಾಮಕಾರಿಯಾಗುವ ಮಾತನ್ನು ಹೇಳಿದನ್ನು ನೋಡಿದರೆ ಬಹುಶಃ ಈ ರೀತಿಯಾದ ಮಾತು ಮತ್ತೊಂದು ಹುಡುಕಲು ಸಾಧ್ಯವಿಲ್ಲ. ಇಂತಹ ಸಮಾನತೆಯನ್ನು ಒದಗಿಸಿಕೊಟ್ಟವರು ನಮ್ಮ ವಚನಕಾರರು. ಕೇವಲ ಮನುಷ್ಯರು ಮಾತ್ರ ನಮ್ಮ ಬಂಧು ಮಿತ್ರರಲ್ಲ. ಸೃಷ್ಟಿಯಲ್ಲಿರುವ

ಇಡೀ ಚೇತನವೇ ನಮ್ಮ ಬಂಧು ಮಿತ್ರರು. ನಾವು ಮಾನವ ಧರ್ಮವನ್ನು ಪಾಲಿಸಬೇಕು. ಸಕಲ ಜೀವಿಗಳಲ್ಲಿ ದಯೆಯನ್ನು ತೋರಿಸಬೇಕು. ಮಾನವರಾದ ನಾವು ಇಂಥ ಒಂದು ಮಾರ್ಗವನ್ನು ಪಾಲಿಸುವುದು ತುಂಬಾ ಮುಖ್ಯವಾಗಿದೆ.

**"ಹೊಲೆಯ ಹೊಲೆಯ ಎಂದೆಡೆ ಹೊಲೆಯರಂತಪ್ಪರಯ್ಯ?**
**ಹೊಲೆಯ ಹೊರಕೇರಿಯಲ್ಲಿರುವವನು**
**ಊರೊಳಗಿಲ್ಲವೇ ಅಯ್ಯಾ, ಹೊಲೆಯರು?**
**ತಾಯಿಗೆ ಬೈದವನೇ ಹೊಲೆಯ**
**ಕೊಡುವ ದಾನಕ್ಕೆ ಅಡ್ಡ ಬಂದವನೇ ಹೊಲೆಯ"[2]**

ನಮ್ಮ ಸಮಾಜದ ವರ್ಣ ವ್ಯವಸ್ಥೆಯಲ್ಲಿ ಕೆಲವರನ್ನು ಊರಿನ ಹೊರಗೆ ಇಟ್ಟು ಅವರನ್ನು ಮುಟ್ಟಿಸಿಕೊಳ್ಳುವುದಿಲ್ಲ. ಇಂಥವರನ್ನು ಕುರಿತು ಚೌಡಯ್ಯನವರ ಒಂದು ವಚನ ಹೀಗಿದೆ. ಕೆಟ್ಟ ಕೆಲಸ ಮಾಡುವವರು ನಿಜವಾದ ಹೊಲೆಯರಾಗುತ್ತಾರೆ. ಮನುಷ್ಯನು ಮಾಡುವ ವೃತ್ತಿಯಿಂದ ಜಾತಿ ಬಂದಿದೆ ಹೊರತು ಅವನ ಹುಟ್ಟಿನಿಂದಲ್ಲ. ಅವನು ಮಾಡುವ ಕೆಲಸದಿಂದ ಜಗತ್ತಿಗೆ ಬಹು ಉಪಯೋಗವಾಗುತ್ತಿದೆ ಎಂಬುದು ಜನರು ಮರೆತ್ತಿದ್ದಾರೆ. ಇಂತಹ ಕೆಟ್ಟದಾದ ವ್ಯವಸ್ಥೆಯ ವಾಸ್ತವವನ್ನು ಶರಣರು ಜನರಿಗೆ ಮನವರಿಕೆ ಮಾಡುತ್ತಿದ್ದಾರೆ. ಇಲ್ಲಿ ಕಲಹಗಳು ಬಂದಾಗ ನನ್ನ ಕುಲ ಹೆಚ್ಚು ನಿನ್ನ ಕುಲ ಕಡಿಮೆ ಎಂದು ಕಚ್ಚಾಡುವುದನ್ನು ಬಿಟ್ಟು ನಾವೆಲ್ಲರೂ ಮನುಷ್ಯರು ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ಹೇಳುವ ಈ ವಚನದ ಅರ್ಥವನ್ನು ಮಾನವರೆಲ್ಲರು ಅರಿಯಬೇಕು.

ಶರಣರು ಮೂಢನಂಬಿಕೆಯನ್ನು ನಂಬುತ್ತಿರಲಿಲ್ಲ. ಮೂಢನಂಬಿಕೆ ಎಂಬುದು ಈ ಸಮಾಜದಲ್ಲಿ ಮೊದಲಿನಿಂದಲೂ ಇಂದಿನವರೆಗೂ ನಮ್ಮಲ್ಲಿ ನಮಗೆ ಗೊತ್ತಿಲ್ಲದೆ ರೀತಿಯಲ್ಲಿ ಬಿಡು ಬಿಟ್ಟಿವೆ. ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ಈ ಮೂಢನಂಬಿಕೆಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮ ನಡುವೆ ಇದೆ. ಇಂದಿನ ವಿಜ್ಞಾನ ಯುಗದಲ್ಲಿ ಕೂಡ ಎಷ್ಟೋ ಜನರು ಇಂತಹ ಮೂಢನಂಬಿಕೆಯನ್ನು ಈಗಲೂ ನಂಬುತ್ತಿದ್ದಾರೆ.

**"ಶುಭಕ್ಕೆ ವಿಘ್ನವಲ್ಲದೆ ಅಶುಭಕ್ಕೆ ವಿಘ್ನವೆ ಅಯ್ಯಾ?**
**ಅಭಿಮಾನಿಗೆ ಅಂಜಿಕೆಯಿಲ್ಲದೆ ಅಪಮಾನಿಗೆ ಅಂಜಿಕೆಯೆ ಅಯ್ಯಾ?**
**ಶುಭಾಶುಭ ಶಿವಾರ್ಪಣವೆಂದು ನಂಬು ಮನವೆ**
**ಕಪಿಲಸಿದ್ದ ಮಲ್ಲೇಂದ್ರನಾಲಯದಲ್ಲಿ"[3]**

ಈ ವಚನದಲ್ಲಿ ವಚನಾಕಾರರು ಯಾವುದೇ ಒಳ್ಳೆಯ ಕೆಲಸ ಮಾಡಿದರೆ ಅದು ಶುಭ. ಕೆಟ್ಟ ಕೆಲಸ ಮಾಡಿದರೆ ಅಶುಭ ಎಂದಿದ್ದಾರೆ. ಒಳ್ಳೆಯ ಕೆಲಸಕ್ಕೆ ಯಾವುದೇ ಮುಹೂರ್ತ ಇರುವುದಿಲ್ಲ. ಎಲ್ಲವೂ ದೇವರಿಗೆ ಅರ್ಪಿಸಿದಾಗ ಭಯ

ಎಂಬ ಮಾತೆ ಬರುವುದಿಲ್ಲ. ವಚನಕಾರರ ಪ್ರಕಾರ ಮನುಷ್ಯ ಪೂರ್ವ ಜನ್ಮದ ಪಾಪದ ಫಲದಿಂದ ಈ ಕಷ್ಟಗಳನ್ನು ಅನುಭವಿಸುತ್ತಾನೆ. ಈ ಜನ್ಮದಲ್ಲಿ ಮಾಡಿದ ಒಳ್ಳೆಯ ಕೆಲಸಕ್ಕೆ ಪ್ರತಿಫಲವು ಮುಂದಿನ ಜನ್ಮದಲ್ಲಿ ಅನುಭವಿಸುತ್ತಾನೆ. ಆದ್ದರಿಂದ ಯಾವುದೇ ರೀತಿಯ ಮೂಢನಂಬಿಕೆಗೆ ಬಲಿ ಆಗದಿರಿ ಎಂದು ಜನಸಾಮಾನ್ಯರನ್ನು ಅಂದ ಶ್ರದ್ಧೆಯ ಅನಿಷ್ಟದಿಂದ ಪಾರು ಮಾಡಲು ಪ್ರಯತ್ನಪಟ್ಟಿದ್ದಾರೆ.

**“ತನು ಬತ್ತಲೆಯಿದ್ದಡೇನು, ಮನ ಶುಚಿಯಾಗದನ್ನಕ್ಕರ**
**ಮಂಡೆ ಬೋಳಾದಡೇನೊ, ಭಾವ ಬಯಲಾಗದನ್ನಕ್ಕರ?**
**ಭಸ್ಮವ ಹೂಸಿದಡೇನೊ,**
**ಕರಣಾದಿ ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ?**
**ಇಂತೀ ಆಶೆಯ ವೇಷದ ಭಾಷೆಗೆ, ಗುಹೇಶ್ವರಾ, ನೀ**
**ಸಾಕ್ಷಿಯಾಗಿ ಛೀ ಎಂಬೆನು”[4]**

ಈ ಮೇಲಿನ ವಚನದಲ್ಲಿ ಅಲ್ಲಮಪ್ರಭು ವೇಷದ ಭೂಟಾಟಿಕೆಯನ್ನು ನಿಂದಿಸುತ್ತಿದ್ದಾರೆ. ದೇಹವು ಬೆತ್ತಲೆ ಆದರೆ ಏನು? ಮನಸ್ಸು ಶುದ್ಧವಾಗುವ ತನಕ ಏನು ಪ್ರಯೋಜನವಾಗದು. ತಲೆಯನ್ನು ಬೋಳಿಸಿಕೊಂಡರೆ ಏನು? ಭಾವ ಶುದ್ದಿ ಆಗಿರಬೇಕು. ಮೈಯೆಲ್ಲಾ ಭಸ್ಮವನ್ನು ಧರಿಸಿ ನೋಡಲು ಸಂನ್ಯಾಸಿಯಾದರೇನು ಇಂದ್ರಿಯಗಳ ವ್ಯಾಮೋಹವನ್ನು ಬಿಟ್ಟಿಲ್ಲವಾದರೆ ಏನು ಪ್ರಯೋಜನವಿಲ್ಲ. ಗುಹೇಶ್ವರ, ನಿನ್ನ ಸಾಕ್ಷಿಯಾಗಿ ಈ ರೀತಿಯಾಗಿ ಮೋಸದ ವೇಷಧಾರಿಗಳನ್ನು ನಾನು ಛೀ ಎಂದು ನಿಂದಿಸುತ್ತೇನೆ ಎಂದು ಹೇಳಿದ್ದಾರೆ.

**“ಹಾಲಕಂಡ ಬೆಕ್ಕು ಮೆಲ್ಲಗೆ ತೆಗೆದು ಕುಡಿಯುತ್ತಿರಲು,**
**ಬಾಲ ನಿಗಿರ್ದ ಬೆಕ್ಕು ಹಾಲ ಕುಡಿಯುತ್ತಿದೆ ಎಂದು**
**ನಾರಿ ಕಂಡು ಗುದಿಗೆಯಲ್ಲಿ ಹೊಡೆದರೆ,**
**ಏಳುತ್ತ ಬೀಳುತ್ತ ಕಾಲೆಗೆದು ಓಡುವಂತೆ,**
**ಏನ ಹೇಳುವೆನಯ್ಯ?**
**ಮರ್ತ್ಯದ ಮನುಜರು ಕರಣಂಗಳ ಹರಿಯಬಿಟ್ಟು**
**ತಮ್ಮ ಬಾಳುವೆಯ ಮರೆದು,**
**ಕಾಲನ ಬಾಯಲ್ಲಿ ಮುಳುಗುತಿಪ್ಪುದನಾರು**
**ಅರಿಯರು ನೋಡಾ–**
**ಬಸವಪ್ರಿಯ ಕೂಡಲ ಚನ್ನಬಸವಣ್ಣಾ”[5]**

ಹಡಪದ ಅಪ್ಪಣ್ಣನ ಈ ಒಂದು ವಚನದಲ್ಲಿ ಮನುಷ್ಯನು ಕಳ್ಳ ಬೆಕ್ಕಿನಂತೆ ಹಾಲನ್ನು ಕಣ್ಣು ಮುಚ್ಚಿ ಕುಡಿಯುವುದರಿಂದ ಯಾರಿಗೂ ಗೊತ್ತಾಗಲ್ಲ ಅಂದುಕೊಳ್ಳುತ್ತಾನೆ. ಆದರೆ ಪ್ರತಿದಿನ ಕದ್ದುಮುಚ್ಚಿ ಹಾಲನ್ನು ಕುಡಿಯುತ್ತಿರುವ ಕಳ್ಳ ಬೆಕ್ಕನ್ನು ಮನೆಯ ಯಜಮಾನಿ ಗಮನಿಸುತ್ತಾಳೆ. ಒಂದು ದಿನ ಸರಿಯಾಗಿ

ಹೊಡೆಯುತ್ತಾಳೆ. ಅದೇ ರೀತಿ ಇಂತಹ ಒಂದು ಮಾನವ ಜನ್ಮವನ್ನು ಪಡೆದ ನಾವು ದೇವರಿಗೆ ಮೆಚ್ಚುವ ಕೆಲಸ ಮಾಡಬೇಕು. ಇಲ್ಲವಾದರೆ ಒಂದಲ್ಲ ಒಂದು ದಿನ ನಮಗೆ ಖಂಡಿತವಾಗಿಯೂ ಶಿಕ್ಷೆ ಆಗುತ್ತದೆ ಎಂದು ಎಚ್ಚರಿಕೆ ನೀಡುತ್ತಿದ್ದಾರೆ.

**‘‘ವೇಷವ ಹೊತ್ತ ಹಿರಿಯರು ಈಶ್ವರ ಧ್ಯಾನದಲಿರಬೇಕು.**
**ವೇಷವ ತೋರಿ, ಗ್ರಾಸಕ್ಕಾಗಿ ಆಸೆ ಮಾಡಿ,**
**ಲೋಗರ ಮನೆಯ ಕಾದು, ಗ್ರಾಸವ ಪಡೆದು**
**ಉದರವ ಹೊರೆವ ವೇಷವು**
**ವೇಶಿಯಿಂದಲೂ ಕರಕಷ್ಟ ಕಾಣಾ ರಾಮನಾಥ’’[6]**

ಗುರುಗಳು, ಯೋಗಿಗಳು, ಸನ್ಯಾಸಿಗಳು ಕಾವಿ ಬಟ್ಟೆಯನ್ನು ಧರಿಸಿ ಹೊಟ್ಟೆ ಹೊರೆಯುವವರನ್ನು ಕುರಿತು ದಾಸಿಮಯ್ಯ ಈ ವಚನದಲ್ಲಿ ಮೇಲ್ನೋಟಕ್ಕೆ ಈ ರೀತಿಯ ವೇಷ ಧರಿಸುವುದರಿಂದ ಏನು ಪ್ರಯೋಜನವಿಲ್ಲ. ಯಾವಾಗಲೂ ದೇವರ ಜ್ಞಾನ, ಚಿಂತನೆ, ಬೋಧನೆಗಳಲ್ಲಿ ನಿರತರಾಗಿರಬೇಕು. ಹೊಟ್ಟೆಪಾಡಿಗಾಗಿ ಬಾಹ್ಯವೇಷಧಾರಿಯಾಗಿ ಮನೆ ಮನೆ ತಿರುಗಿ ಬಟ್ಟೆ, ಆಹಾರ ಸಂಗ್ರಹ ಮಾಡುವುದು ಸೂಳೆಯರ ವರ್ತನೆಗಿಂತಲೂ ಬಲು ಕೀಳು ಎಂದು ಟೀಕಿಸಿದ್ದಾರೆ.

ಕರ್ನಾಟಕದ ಚರಿತ್ರೆಯಲ್ಲಿ ಶರಣರ ಕ್ರಾಂತಿ ಚಿರಸ್ಮರಣೀಯವಾದದು. ಒಬ್ಬ ಮಹಿಳೆ ತನ್ನ ಎಲ್ಲಾ ಬಂಧನದಿಂದ ಮುಕ್ತವಾಗಿ ಹೊರಬಂದು ತನ್ನ ಅಂತರಂಗದಲ್ಲಿ ಅಡಗಿರುವ ಅನಿಸಿಕೆಗಳನ್ನು ಧೈರ್ಯವಾಗಿ ಬಿಚ್ಚಿಡುವ ಸಾಹಸವನ್ನು ಮಾಡಿದಳು. ಸಮಾಜದ ಎಲ್ಲಾ ಸ್ತರಗಳಲ್ಲಿಯೂ ಪುರುಷನೊಟ್ಟಿಗೆ ಸಮಾನವಾಗಿನಿಲ್ಲಬಹುದು ಎಂದು ಇಡೀ ಜಗತ್ತಿಗೆ ತೋರಿಸಿದ ಧೀರ ಮಹಿಳೆ ಅಕ್ಕಮಹಾದೇವಿ.

ಅಕ್ಕಮಹಾದೇವಿಯ ಅತ್ಯಂತ ಜನಪ್ರಿಯ ವಚನಗಳಲ್ಲಿ ಒಂದಾದ ಈ ಒಂದು ವಚನ ಎಲ್ಲರಿಗೂ ಅನ್ವಯಿಸುವ ವಿಚಾರವನ್ನು ಹೇಳುತ್ತದೆ.

**‘‘ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ?**
**ಸಮುದ್ರದ ತಡಿಯಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯಾ?**
**ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ?**
**ಮಲ್ಲಿಕಾರ್ಜುನದೇವ ಕೇಳಯ್ಯ ಲೋಕದೊಳಗೆ ಹುಟ್ಟಿದ ಬಳಿಕ**
**ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ**
**ಸಮಾಧಾನಿಯಾಗಿರಬೇಕು. ’’[7]**

ಬೆಟ್ಟ ಗುಡ್ಡ ಕಾಡುಗಳಲ್ಲಿ ಕ್ರೂರ ಪ್ರಾಣಿಗಳು ಇರುವುದು ಸಹಜ. ಅಲ್ಲಿ ಮನೆ ಮಾಡಿ ಪ್ರಾಣಿಗಳಿಗೆ ಹೆದರಿದರೆ ಹೇಗೆ? ಸಮುದ್ರದ ತೀರದ ಮೇಲೆ ಮನೆ ಮಾಡಿ ಅಲ್ಲಿನ ಅಲೆಗಳಿಗೆ ಭಯ ಪಟ್ಟರೆ ಆಗುತ್ತದೆಯೇ? ಹಾಗೆಯೇ ಸಂತೆಯಲ್ಲಿ ಮನೆ ಮಾಡಿ ಶಬ್ದಕ್ಕೆ ಹೆದರಿದರೆ ಹೇಗೆ? ಈ ರೀತಿಯ ಹಲವು ಉದಾಹರಣೆಗಳ ಮೂಲಕ

ಮುಖ್ಯವಾದ ವಿಷಯವನ್ನು ಜನರಿಗೆ ಅರ್ಥವಾಗುವ ಹಾಗೆ ಪ್ರತಿಪಾದಿಸಿದ್ದಾಳೆ. ಮಾನವನ ಜೀವನದಲ್ಲಿ ಸುಖ ದುಃಖ, ಸಿಹಿ ಕಹಿ ಎಲ್ಲದರ ಮಿಶ್ರಣವಿರುತ್ತದೆ. ಬದುಕಿನ ಹಾದಿಯಲ್ಲಿ ಹೂವೇ ತುಂಬಿರುವುದಿಲ್ಲ. ಒಮ್ಮೊಮ್ಮೆ ಮುಳ್ಳನ್ನು ತುಳಿಯಬೇಕಾಗುತ್ತದೆ. ಕಷ್ಟ, ಸುಖ ಯಾವುದೇ ಜೀವನದಲ್ಲಿ ಬಂದರೆ ಸಮವಾಗಿ ಸ್ವೀಕರಿಸುವ ಮನಸ್ಥಿತಿ ಮನುಷ್ಯನಿಗೆ ಇರಬೇಕು. ಜೀವನದಲ್ಲಿ ಯಾವುದೇ ಟೀಕೆಗಳು ಬಂದರು ಕೋಪ ಮಾಡಿಕೊಳ್ಳದೆ ಸಮಾಧಾನವಾಗಿ ಎಲ್ಲವನ್ನು ಸಂತೋಷದಿಂದ ಸ್ವೀಕರಿಸುತ್ತಾ ಬಾಳುವುದೇ ನಿಜವಾದ ಜೀವನ ಎಂದು ಈ ಒಂದು ವಚನ ಒಳ ಅರ್ಥ ತಿಳಿಸುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಪುರುಷರ ಅಧೀನಳಾಗಿ ಇರುವುದನ್ನು ನೋಡುತ್ತೇವೆ. ಶತಶತಮಾನಗಳಿಂದ ಮಹಿಳೆಯು ಪ್ರತಿಭಟನಾಧ್ವನಿ ನಮಗೆ ಕೇಳಿಸುತ್ತದೆ.

**"ಗಂಡು ಮೋಹಿಸು ಹೆಣ್ಣ ಹಿಡಿದಡೆ**
**ಅದು ಒಬ್ಬರ ಒಡವೆ ಎಂದು ಅರಿಯಬೇಕು**
**ಹೆಣ್ಣು ಮೋಹಿಸಿ ಗಂಡ ಹಿಡಿದಡೆ**
**ಉತ್ತರವಾವುದೆಂದರಿಯಬೇಕು**
**ಈಎರಡರ ಉಭಯವ**
**ಕಳೆದು ಸುಖಿ ತಾನಾಬಲ್ಲಡೆ**
**ನಾಸ್ತಿನಾಥನು ಪರಿಪೂರ್ಣನೆಂಬೆ"**[8]

ಗೊಗ್ಗವ್ವೆಯ ಈ ಒಂದು ವಚನ ಸ್ತ್ರೀಪರ ಧೋರಣೆಯನ್ನು ಪ್ರತಿಭಟಿಸಿದ ಧ್ವನಿ ಕೇಳಿಸುತ್ತದೆ. ಮಹಿಳೆ ಪುರುಷನ ಸ್ವತ್ತಾದಂತೆ ಪುರುಷನು ಕೂಡ ಮಹಿಳೆಯ ಸ್ವತ್ತಾಗಬಹುದಲ್ಲವೇ ಎಂದು ಹೇಳುವ ಈ ಒಂದು ವಚನ 12ನೇ ಶತಮಾನದಲ್ಲಿ ಗೊಗ್ಗವ್ವೆ ಹೇಳಿರುವುದು ನಿಜಕ್ಕೂ ಆಶ್ಚರ್ಯವಾಗುತ್ತದೆ.

**"ಲಂಚ ವಂಚನಕ್ಕೆ ಕೈಯಾನದ ಭಾಷೆ**
**ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ**
**ನಾನು ಕೈಮುಟ್ಟಿ ಎತ್ತಿದೆನಾದಡೆ**
**ನಿಮ್ಮಾಣೆ ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ"**[9]

ಲಂಚ ವಂಚನೆಗಳ ನಿರ್ಮೂಲನೆಯು ಸಾಮಾಜಿಕ ಭದ್ರತೆಯ ತಳಹದಿ. ಅತಿ ಆಸೆಗೆ ಬಲಿಯಾಗದೆ ಇದ್ದಿದ್ದರಲ್ಲಿ ತೃಪ್ತಿ ಪಡೆದರೆ ಯಾವುದೇ ಲಂಚ ವಂಚನೆಗಳ ಪ್ರಶ್ನೆ ಬರುವುದಿಲ್ಲ. 'ಆಸೆಯೇ ದುಃಖಕ್ಕೆ ಮೂಲ' ಎಂದ ಹಾಗೆ ಅನರ್ಥ ಮೂಲವಾದ ಆಸೆಯನ್ನು ಬಿಡಬೇಕು. 'ನೀವಿಕ್ಕದ ಭಿಕ್ಷೆಯೊಳಗಿಪ್ಪ' ಎಂಬ ಸತ್ಯಕ್ಕಳ ಮಾತು ನಿಜಕ್ಕೂ ಗಮನಾರ್ಹವಾಗಿದೆ.

**"ನಡೆನುಡಿ ಶುದ್ಧವಿಲ್ಲದವರು ಪುರಾತನರ ವಚನವ ಓದಿದಡೆ**
**ಅನುಭಾವವ ಮಾಡಿದಡೆ ಮೆಚ್ಚುವರೆ?**
**ನಡೆನುಡಿ ಶುದ್ಧವಿಲ್ಲದವರು ಪುರಾತನ ವಚನವ ಓದಿದಡೆ**
**ಆ ಹಂದಿಗಿಂತ ಕರಕಷ್ಟ? "[10]**

ನಡೆ ನುಡಿ ಶುದ್ಧವಿಲ್ಲದವರು ಪುರಾತನ ವಚನಗಳನ್ನು ಓದಲು ಅರ್ಹರಲ್ಲ. ಅವರು ಹಂದಿಗಿಂತ ಕನಿಷ್ಠರು. ಬಾಹ್ಯ ಆಡಂಬರಕ್ಕೆ ವಚನಗಳನ್ನು ವಾಚನ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವ ಸ್ವಾರ್ಥಿಗಳನ್ನು ಮಹದೇವಮ್ಮ ಕಟುವಾಗಿ ಟೀಕಿಸಿದ್ದಾರೆ.

**"ಆಸೆಯೆಂಬುದು ಅರಸಿಂಗಲ್ಲದೆ,**
**ಶಿವಭಕ್ತರಿಗುಂಟೆ ಅಯ್ಯಾ?**
**ರೋಷವೆಂಬುದು ಯಮದೂತರಿಗಲ್ಲದೆ,**
**ಅಜಾತರಿಗುಂಟೆ ಅಯ್ಯಾ?**
**ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ,**
**ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯಾ"[11]**

ಶರಣರು ತಮ್ಮ ಅಗತ್ಯಕ್ಕಿಂತ ಹೆಚ್ಚಾಗಿ ಯಾವುದೂ ಆಸೆ ಪಡುವವರಲ್ಲ. ಆಯ್ದಕ್ಕಿ ಲಕ್ಕಮ್ಮನ ಗಂಡನಾದ ಆಯ್ದಕ್ಕಿ ಮಾರಯ್ಯ ಪ್ರತಿದಿನ ಅಕ್ಕಿ ಕಾಳುಗಳನ್ನು ಆಯ್ದು ತಂದು ಜಂಗಮರಿಗೆ ದಾಸೋಹ ಮಾಡಿ ತಾವು ಜೀವಿಸುತ್ತಿದ್ದರು. ಒಂದು ದಿನ ಮಾರಯ್ಯನು ಅಗತ್ಯಕ್ಕಿಂತಲೂ ಹೆಚ್ಚಿನ ಅಕ್ಕಿಕಾಳುಗಳನ್ನು ಆಯ್ದು ತಂದಾಗ ಆಯ್ದಕ್ಕಿ ಲಕ್ಕಮ್ಮ ಗಂಡನನ್ನು ಕುರಿತು ಶಿವ ಭಕ್ತರಿಗೆ ಆಸೆ ಇರುವುದಿಲ್ಲ. ಕೋಪವು ಯಮದೂತರಿಗೆ ಮಾತ್ರ ಇರುತ್ತದೆ ಹೊರತು ಶಿವಭಕ್ತರಿಗಲ್ಲ. ಪ್ರತಿದಿನಕ್ಕಿಂತ ಹೆಚ್ಚಾಗಿ ತಂದಿದ್ದ ಅಕ್ಕಿಯನ್ನು ಅಲ್ಲೇ ಸುರಿದು ಬನ್ನಿ ಎನ್ನುವ ಈ ಮಾತು ಎಲ್ಲಾ ಕಾಲಕ್ಕೂ ಅನ್ವಯವಾಗುತ್ತದೆ. ಇಂದಿನ ಸಮಾಜದ ಪ್ರತಿಯೊಬ್ಬ ಮಹಿಳೆ ನಡೆದುಕೊಂಡರೆ ಮನುಷ್ಯ ಜೀವನದಲ್ಲಿ ತುಂಬಾ ಸಂತೋಷವಾಗಿರುವುದರಲ್ಲಿ ಸಂದೇಹವಿಲ್ಲ.

ವಯಸ್ಸು ಮುಖ್ಯವಲ್ಲ, ಮನುಷ್ಯರಲ್ಲಿ ದೊಡ್ಡತನವಿರಬೇಕೆಂದು ಹೇಳುವ ಅಕ್ಕಮ್ಮಳ ಈ ವಚನ ಎಲ್ಲರೂ ತಿಳಿಯುವುದು ಮುಖ್ಯವಾಗಿದೆ.

**"ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ!**
**ಬಿಡಾರ ಬಿಡಾರವೆಂದು ಹಿರಿಯತನಕೆ ಅಹಂಕರಿಸಿ,**
**ಆಚಾರವಂ ಬಿಟ್ಟು ಅನಾಚಾರವಂ ಸಂಗ್ರಹಿಸಿ,**
**ಭಕ್ತರೊಳು ಕ್ರೋಧ, ಭ್ರಷ್ಟರೊಳು ಮೇಳ–**
**ಇವರು ನರಕಕೇ ಯೋಗ್ಯರು.**
**ಆಚಾರವೆ ಪ್ರಾಣವಾದ ರಾಮೇಶ್ವರನ ಲಿಂಗದಲ್ಲಿ"[12]**

ವಯಸ್ಸಿನಿಂದ ಹಿರಿಯರಾದ ಮಾತ್ರಕ್ಕೆ ಹಿರಿಯರೆಂದೆನಿಸಿಕೊಳ್ಳುವುದಿಲ್ಲ. ಮೇಕೆಗೂ ಗಡ್ಡವಿರುತ್ತದೆ. ಆದರೆ ಏನು ಪ್ರಯೋಜನವಿಲ್ಲ. ಹಿರಿಯರಲ್ಲಿ

ದೊಡ್ಡತನವಿರಬೇಕು. ಜೀವನದುದ್ದಕ್ಕೂ ಅನಾಚಾರವನ್ನು ಮಾಡುತ್ತಾ ಬಂದು ನಾವು ಹೆಚ್ಚು ಎಂಬ ಅಹಂಕಾರದಿಂದ ಮೆರೆಯುವುದರಿಂದ ಅವರು ಸರ್ವಸಂಗ ಪರಿತ್ಯಾಗಿಗಳಾಗಿರುವುದಿಲ್ಲ. ಇಂತಹ ಭೂಟಾಟಿಕೆಯ ಹಿರಿಯರು ಖಂಡಿತವಾಗಿಯೂ ನರಕಕ್ಕೆ ಹೋಗುತ್ತಾರೆ ಎಂದು ಈ ವಚನ ನಮಗೆ ತಿಳಿಸುತ್ತದೆ.

**ಉಪಸಂಹಾರ:**

12ನೇ ಶತಮಾನದಲ್ಲಿ ವಚನಕಾರರು ಸಾಮಾಜಿಕ, ಧಾರ್ಮಿಕ, ಆರ್ಥಿಕ, ಜಡ ವ್ಯವಸ್ಥೆಯಲ್ಲಿ ಪರಿವರ್ತನೆಗೆ ನಾಂದಿ ಹಾಡಿದರು. ಮನುಷ್ಯರಲ್ಲಿ ಸಾಮರಸ್ಯವನ್ನು ತಂದ ಶ್ರೇಷ್ಠ ಸಂಘಟನಾಕಾರರು. ಸಮಾಜದಲ್ಲಿ ನಡೆಯುವ ಅನ್ಯಾಯ, ಮಾನಸಿಕ ಗೊಂದಲಗಳನ್ನು ಧೈರ್ಯದಿಂದ ತೆಗೆದು ಹಾಕುವ ಪ್ರಯತ್ನ ಮಾಡಿದ್ದಾರೆ. ಸ್ತ್ರೀ ಪುರುಷ ಎಂಬ ಭೇದ ಭಾವವಿಲ್ಲದೆ ಎಲ್ಲರೂ ಒಂದೇ ಎಂಬ ವಿಚಾರವನ್ನು ಪ್ರತಿಪಾದಿಸಿದವರು. ಸಮಾಜವನ್ನು ತುಳಿಯುತ್ತಿರುವ ಶಕ್ತಿಯನ್ನು ಗುರುತಿಸಿ ಸಾಂಪ್ರದಾಯಿಕ ಪಾತ್ರಗಳನ್ನು ನಿರಾಕರಿಸಿದರು. 'ಕಾಯಕವೇ ಕೈಲಾಸ' ಎಂದು ದುಡಿದರು. 'ದಯೆಯೇ ಧರ್ಮದ ಮೂಲವಯ್ಯ' ಎಂದು ಸಾರಿದರು. ಅಜ್ಞಾನ, ಅಸಮಾನತೆ, ಸ್ವಾರ್ಥ ಕಂದಾಚಾರಗಳಿಂದ ತುಂಬಿದ್ದ ಅನೀತಿ, ಅಧರ್ಮಗಳನ್ನು ಸರಿಪಡಿಸಿ ಮಾನವೀಯ ಹೊಸ ಸಮಾಜವನ್ನು ನಿರ್ಮಾಣ ಮಾಡಿದರು. ವಚನಕಾರರು ಕಟ್ಟಿದ್ದ ಅನುಭವ ಮಂಟಪ ನಮ್ಮಲ್ಲಿ ಜ್ಞಾನ ಮಾನವೀಯತೆ ಇರುವವರಿಗೆ ಇರುತ್ತದೆ. ಅವರ ಸಮಾಜವಾದಿ ಚಿಂತನೆಗಳು ನಮ್ಮೆಲ್ಲರ ಜೀವನದ ದಿಕ್ಕನ್ನು ತೋರಿಸುತ್ತವೆ. ಇವರ ಅನುಭವಗಳು ಕೇವಲ ಅನುಭವವಾಗಿ ಉಳಿಯದೆ ಸಿದ್ಧಾಂತವಾಗಿ ಬೆಳೆದು ನಿಲ್ಲಬೇಕು ಎಂಬುದೇ ನನ್ನ ಆಶಯ.

**ಕೊನೆ ಟಿಪ್ಪಣಿಗಳು:**

1. ಕಲಬುರ್ಗಿ ಎಂ. ಎಂ. , (1993), ಬಸವಣ್ಣನ ವಚನ, ಸಮಗ್ರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ಸಂ. 18
2. ಬಳ್ಳಾರಿ ಎನ್. ಬಿ. , (2025), ಅಂಬಿಗರ ಚೌಡಯ್ಯನವರ ವಚನಗಳು, ಜ್ಯೋತಿಶ್ರೀ ಪ್ರಕಾಶನ, ಗುಲ್ಬರ್ಗ, ಪು. ಸಂ. 16
3. ಹಿರೇಮಠ ಆರ್. ಸಿ. , (1968), ಸಿದ್ದರಾಮೇಶ್ವರ ವಚನಗಳು, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ಸಂ. 220
4. ಶ್ರೀ ಸಿದ್ಧರಾಮ ಶರಣರು ಬೆಲ್ದಾಳ, (1993), ಅಲ್ಲಮಪ್ರಭುದೇವರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ಸಂ. 166
5. ಮಲ್ಲೇಶಯ್ಯ ಕೆ. ಬಿ. , (2018), ಕಮ್ಮಟ ಕೀಲಿ, ಅರವಿಂದ್ ಇಂಡಿಯಾ, ಬೆಂಗಳೂರು, ಪು. ಸಂ. 416
6. ಅದೇ, ಪು. ಸಂ. 119
7. ರುದ್ರಮೂರ್ತಿ ಶಾಸ್ತ್ರಿ ಸು. , (2023), ಅಕ್ಕಮಹಾದೇವಿಯವರ ನೂರಾರು ವಚನಗಳು, ಕಾಮಧೇನು, ಪುಸ್ತಕ ಭವನ, ಬೆಂಗಳೂರು, ಪು. ಸಂ. 89
8. ವೀರಣ್ಣ ರಾಜೂರ್, (1993), ಶಿವಶರಣೆಯರು ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ಸಂ. 246
9. ಅದೇ, ಪು. ಸಂ. 371
10. ಬೀಳಗಿ ಎಚ್. ಎಂ. , (ಅಗಸ್ಟ್ 1999), ವಚನಕಾರ್ತಿಯರು–1, ಉಪನ್ಯಾಸ ಗ್ರಂಥಮಾಲೆ, ಪು. ಸಂ. 45
11. ಮಲ್ಲೇಶಯ್ಯ ಕೆ. ಬಿ. , (2018), ಕಮ್ಮಟ ಕೀಲಿ, ಅರವಿಂದ್ ಇಂಡಿಯಾ, ಬೆಂಗಳೂರು, ಪು. ಸಂ. 244
12. ಅದೇ, ಪು. ಸಂ. 245

**ಪರಾಮರ್ಶನ ಗ್ರಂಥಗಳು:**


1. ಚಿದಾನಂದಮೂರ್ತಿ ಎಮ್. , (1975), ವಚನ ಸಾಹಿತ್ಯ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
2. ವೀರಣ್ಣ ರಾಜೂರ್, (1993), ಶಿವಶರಣೆಯರು ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
3. ರುದ್ರಮೂರ್ತಿ ಶಾಸ್ತ್ರಿ ಸು., (2023), ಅಕ್ಕಮಹಾದೇವಿಯವರ ನೂರಾರು ವಚನಗಳು, ಕಾಮಧೇನು, ಪುಸ್ತಕ ಭವನ, ಬೆಂಗಳೂರು.
4. ಮಲ್ಲೇಶಯ್ಯ ಕೆ. ಬಿ. , (2018), ಕಮ್ಮಟ ಕೀಲಿ, ಅರವಿಂದ್ ಇಂಡಿಯಾ, ಬೆಂಗಳೂರು.
5. ಬಳ್ಳಾರಿ ಎನ್. ಬಿ. , (2025), ಅಂಬಿಗರ ಚೌಡಯ್ಯನವರ ವಚನಗಳು, ಜ್ಯೋತಿಶ್ರೀ ಪ್ರಕಾಶನ, ಗುಲ್ಬರ್ಗ.
6. ಅಲ್ಲಮಪ್ರಭುದೇವರ ವಚನ ಸಂಪುಟ, (1993), ಶೀ ಸಿದ್ಧರಾಮ ಶರಣರು ಬೆಲ್ದಾಳ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.